# ಕ್ಯಾತನಹಳ್ಳಿ ರಾಮಣ್ಣ ಅವರ ಬಹುಮುಖಿ ನೆಲೆಯ 'ಎರಡು ಅಧ್ಯಯನಗಳು'

**ಶಿಲ್ಪಶ್ರೀ ಹೆಚ್.ವಿ.*** & **ಶಿವಕುಮಾರ ಸಿ.****

**DOI: https://doi.org/10.5281/zenodo.23096950**

**ABSTRACT**

ಡಾ. ಕ್ಯಾತನಹಳ್ಳಿ ರಾಮಣ್ಣ ಅವರ ಜಾನಪದ ಸಂಶೋಧನಾ ಕೃತಿ 'ಎರಡು ಅಧ್ಯಯನಗಳು' ಗೊಂದಲಿಗರು ಮತ್ತು ಕೊಂತಿಪೂಜೆಯ ಕುರಿತಾದ ಸಮಗ್ರ ವಿಶ್ಲೇಷಣೆಯನ್ನು ಒಳಗೊಂಡಿದೆ. ಉತ್ತರ ಕರ್ನಾಟಕದ ವೃತ್ತಿಗಾಯಕರಾದ ಗೊಂದಲಿಗರ ಮೂಲ ಮಹಾರಾಷ್ಟ್ರವೆಂದು ಐತಿಹಾಸಿಕ ಆಧಾರಗಳೊಡನೆ ನಿರೂಪಿಸುವ ಅವರು, ಅವರ ಕಲಾ ವಿಧಾನ, ವಲಸೆ ಮತ್ತು ಜೀವನಶೈಲಿಯನ್ನು ವಿಸ್ತೃತವಾಗಿ ದಾಖಲಿಸಿದ್ದಾರೆ. ಮತ್ತೊಂದೆಡೆ, ದಕ್ಷಿಣ ಕರ್ನಾಟಕದಲ್ಲಿ ಮಹಿಳೆಯರು ಆಚರಿಸುವ ಕೊಂತಿಪೂಜೆಯ ಹಿನ್ನೆಲೆ, ಆಚರಣೆಯ ಹಂತಗಳು ಮತ್ತು ಹಾಡುಗಳನ್ನು ವಿವರಿಸುತ್ತಾ, ಮಹಾಭಾರತದ ಕುಂತಿಯನ್ನು ಫಲವತ್ತತೆಯ ಹಾಗೂ ಕಷ್ಟಸಹಿಷ್ಣುತೆಯ ಸಂಕೇತವಾಗಿ ಜನಪದರು ಆರಾಧಿಸುವ ಬಗೆಯನ್ನು ಕಟ್ಟಿಕೊಟ್ಟಿದ್ದಾರೆ. ಕಣ್ಮರೆಯಾಗುತ್ತಿರುವ ಈ ವಿಶಿಷ್ಟ ಜಾನಪದ ಆಚರಣೆಗಳ ಹಿಂದಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಶೋಧಿಸುವ ಈ ಕೃತಿಯು, ತನ್ನ ನಿಖರವಾದ ಕ್ಷೇತ್ರಕಾರ್ಯ ಮತ್ತು ಅಂತರ್‌ಶಿಸ್ತೀಯ ದೃಷ್ಟಿಕೋನದಿಂದಾಗಿ ಮುಂದಿನ ತಲೆಮಾರಿನ ಜಾನಪದ ಅಧ್ಯಯನಕಾರರಿಗೆ ಒಂದು ಶ್ರೇಷ್ಠ ಮಾದರಿಯಾಗಿದೆ ಎಂಬುದನ್ನು ಇಲ್ಲಿ ತಾರ್ಕಿಕವಾಗಿ ಚರ್ಚಿಸಲಾಗಿದೆ.

**KEYWORDS:** ಕ್ಯಾತನಹಳ್ಳಿ ರಾಮಣ್ಣ, ಜಾನಪದ ಸಂಶೋಧನೆ, ಗೊಂದಲಿಗರು, ಕೊಂತಿಪೂಜೆ, ಸಾಂಸ್ಕೃತಿಕ ಆಚರಣೆ.

* **ಡಾ. ಶಿಲ್ಪಶ್ರೀ ಹೆಚ್. ವಿ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ. ಆರ್. ಸಾಗರ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ.

** **ಡಾ. ಶಿವಕುಮಾರ ಸಿ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ, ಪಾಂಡವಪುರ ತಾ., ಮಂಡ್ಯ ಜಿಲ್ಲೆ.

ಜಾನಪದವು ಯಾವುದೇ ಪ್ರದೇಶದ, ನಾಡಿನ ಸಂಸ್ಕೃತಿಯ ತಾಯಿಬೇರು. ಈ ಜಾನಪದವು ಶ್ರೀಸಾಮಾನ್ಯರ ಬದುಕಿನ ಹಲವು ಶಾಖೆಗಳಲ್ಲಿ ಟೊಂಗೆ ಟೊಂಗೆಯಾಗಿ ಕವಲೊಡೆದು ಸಮೃದ್ಧವಾದ ವೃಕ್ಷವಾಗಿ ಹಬ್ಬಿ ನಿಂತಿದೆ. ಹಾಡು, ಕಥೆ, ಕುಣಿತ, ಆಚರಣೆ, ನಂಬಿಕೆ, ದೈವ, ವೈದ್ಯ, ಕಲೆ–ಚಿತ್ತಾರ, ಗಾದೆ, ಒಗಟು ಮುಂತಾದ ಶಾಖೆಗಳಾಗಿ ಚಮತ್ಕಾರದಿಂದ ಬೆರಗು ಮೂಡುವಂತೆ ಬೆಳೆದಿವೆ. ಹೀಗೆ ವಿವಿಧ ಮಜಲುಗಳಲ್ಲಿ ವಿಸ್ತಾರಗೊಂಡಿರುವ ಜಾನಪದದ ಹರಹನ್ನು ಅರಿಯಲು ಹಲವು ಜಾನಪದ ಆಸಕ್ತರು, ಸಾಹಿತಿಗಳು, ವಿದ್ವಾಂಸರು ಪ್ರಯತ್ನಿಸಿದ್ದಾರೆ. 18ನೇ ಶತಮಾನದಿಂದಲೇ ಜಾನಪದದ ಸಂಗ್ರಹ, ಸಂಶೋಧನೆ, ಅಧ್ಯಯನಗಳ ಮೂಲಕ ಸಂಸ್ಕೃತಿಯ ಮೌಖಿಕ ಮತ್ತು ಭೌತಿಕ ಅಂಶಗಳನ್ನು ದಾಖಲಿಸುವ ಪ್ರಕ್ರಿಯೆಗಳು ಆರಂಭವಾಗಿ ಅನೇಕ ಮೈಲುಗಲ್ಲುಗಳೇ ಸ್ಥಾಪಿತವಾಗಿವೆ. ಪರಿಣಾಮವಾಗಿ ಜಾನಪದವು ಒಂದು ವಿದ್ವತ್ತಿನ ಕ್ಷೇತ್ರವೂ ಆಗಿ, ಅದರ ಸಂಸ್ಕೃತಿಯನ್ನು ಜೀವಂತವಾಗಿಡಲು ಸಹಾಯಕವಾಗಿದೆ.

ಈ ವಿದ್ವತ್ತಿನ ಕ್ಷೇತ್ರದಲ್ಲಿ ತೊಡಗಿಕೊಂಡು ತಮ್ಮ ಬದುಕನ್ನೇ ಜಾನಪದವಾಗಿಸಿಕೊಂಡ ಸಾಕಷ್ಟು ವಿದ್ವಾಂಸರು ಈ ನಾಡಿನಲ್ಲಿದ್ದಾರೆ. ಅಂತಹ ಗಣ್ಯ ವಿದ್ವಾಂಸರಲ್ಲಿ ಪ್ರಮುಖರೊಬ್ಬರೆಂದರೆ ಡಾ. ಕ್ಯಾತನಹಳ್ಳಿ ರಾಮಣ್ಣ ಅವರು.

1970ರ ದಶಕದಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಬೋಧಕರಾಗಿ, ಸಂಶೋಧನ ಸಹಾಯಕರಾಗಿ ಕಾರ್ಯನಿರ್ವಹಿಸಿದ ರಾಮಣ್ಣ ಅವರಿಂದ ರಚಿತವಾದ ಕೃತಿಗಳು 85. ಜಾನಪದ ಸಂಗ್ರಹಗಳು, ಜನಪದ ನಾಟಕ, ಕಥಾ ಸಂಕಲನಗಳು, ವ್ಯಕ್ತಿಚಿತ್ರಗಳ ಜೊತೆಗೆ ಜಾನಪದ ಸಂಶೋಧನೆಗೂ ಗಣನೀಯ ಕೊಡುಗೆಗಳನ್ನು ನೀಡಿರುವ ಅವರ ಹಲವು ಕೃತಿಗಳು ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದು ಹೆಸರುವಾಸಿಯಾಗಿವೆ. ಪ್ರಸ್ತುತ ಲೇಖನದಲ್ಲಿ ರಾಮಣ್ಣ ಅವರ ಗೊಂದಲಿಗರು ಮತ್ತು ಕೊಂತಿಪೂಜೆಯ ಬಗೆಗಿನ ಅಧ್ಯಯನಗಳ ಸಂಕಲನವಾದ ಎರಡು ಅಧ್ಯಯನಗಳು ಎಂಬ ಕೃತಿಯನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ.

ಗೊಂದಲಿಗರು : ಒಂದು ಅಧ್ಯಯನ ಎಂಬುದು 1982ರಲ್ಲಿ ರಾಮಣ್ಣ ಅವರು ಪ್ರಕಟಿಸಿದ ಕೃತಿ. ಕೊಂತಿಪೂಜೆ : ಒಂದು ಅಧ್ಯಯನ ಎಂಬುದು 1985ರಲ್ಲಿ ಪ್ರಕಟಿಸಿದ ಕೃತಿ. ಇವೆರಡೂ ಕೃತಿಗಳಿಗೆ ಕ್ರಮವಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನಗಳು ದೊರೆತಿವೆ. ಈ ಎರಡೂ ಕೃತಿಗಳನ್ನು ಒಟ್ಟಿಗೆ ಸೇರಿಸಿ 2021ರಲ್ಲಿ ಎರಡು ಅಧ್ಯಯನಗಳು ಎಂಬ ಕೃತಿಯನ್ನು ಪ್ರಕಟಿಸಲಾಗಿದೆ.

ಗೊಂದಲಿಗರ ಬಗೆಗಿನ ಅಧ್ಯಯನದಲ್ಲಿ ರಾಮಣ್ಣ ಅವರು ಗೊಂದಲಿಗರು ಯಾರು? ಅವರ ಮೂಲ ಸ್ಥಳ ಯಾವುದು? ಅವರ ಕಥನ ರೀತಿ ಹಾಗೂ ಕಲಾ ವಿಧಾನ ಯಾವುದು? ಎಂಬ ಪ್ರಶ್ನೆಗಳನ್ನು ಎತ್ತಿಕೊಂಡು ಅವುಗಳಿಗೆ ಆಧಾರ ಸಮೇತ ಫಲಿತಗಳನ್ನು ನೀಡುವ ಕಾರ್ಯ ನಿರ್ವಹಿಸಿದ್ದಾರೆ.

ಗೊಂದಲಿಗರು ಉತ್ತರ ಕರ್ನಾಟಕದ ವೃತ್ತಿಗಾಯಕರು. ಆದರೆ ಇವರ ಮೂಲಸ್ಥಳದ ಬಗ್ಗೆ ಹಲವು ವಾದಗಳಿವೆ. ಮುಖ್ಯವಾಗಿ ಗೊಂದಲಿಗರು ಕರ್ನಾಟಕದವರು ಎಂಬ ವಾದವಿದೆ. ಅಂತೆಯೇ ಗೊಂದಲಿಗರು ಮರಾಠಿಗರು ಎಂಬ ವಾದವೂ ಇದೆ. ಇವೆರಡರ ನಡುವಿನ ತಿಕ್ಕಾಟವನ್ನು ವಿಶ್ಲೇಷಿಸುತ್ತ ಗೊಂದಲಿಗರ ಮೂಲ ಮಹಾರಾಷ್ಟ್ರ, ಇವರು ಮರಾಠಿಗರು ಎಂಬ ವಾದವನ್ನು ರಾಮಣ್ಣ ಅವರು ಈ ಕೃತಿಯಲ್ಲಿ ಸಾಧಿಸುತ್ತಾರೆ.

**ಗೊಂದಲಿಗರ ಅಧ್ಯಯನ ಕೃತಿಯಲ್ಲಿ ಪ್ರತಿಪಾದಿತವಾಗುವ ಪ್ರಮುಖ ವಿಚಾರಗಳು ಇಂತಿವೆ:**

- ಜಮದಗ್ನಿ ಮಹರ್ಷಿ ಮತ್ತು ಆತನ ಪತ್ನಿ ರೇಣುಕೆ ಗೊಂದಲಿಗರ ಜಾತಿಯ ಸ್ಥಾಪಕರೆಂದೂ 300 ವರ್ಷಗಳ ಹಿಂದೆ ಮಾಹುರ ಮತ್ತು ತುಳಜಾಪುರಗಳಿಂದ ಡೆಕ್ಕನ್ ಪ್ರದೇಶಕ್ಕೆ ವಲಸೆ ಬಂದ ಗೊಂದಲಿಗರು ದೇವಿ ಭವಾನಿಯ ಭಕ್ತರು, ಮಕ್ಕಳಂತೆ.
- 17ನೇ ಶತಮಾನದ ಆರಂಭದಲ್ಲಿ ತುಳಜಾಪುರದ ಅಂಬಾ ಭವಾನಿಯ ಆರಾಧನೆ ಡೆಕ್ಕನ್ ಭಾಗದಲ್ಲಿ ಆರಂಭವಾದಾಗ ಮರಾಠಿಗರಲ್ಲಿಯು ಇದು ಶುರುವಾಗಿ ಗೊಂದಲಿಗರಿಗೆ ಮಾನ್ಯತೆ ದೊರೆತಿದೆ.
- ಮಹಾರಾಷ್ಟ್ರದ ಜ್ಞಾನೇಶ್ವರಿ ಕೃತಿಯಲ್ಲಿ ಗೋಂದಲೀ ಎಂಬ ಶಬ್ದದ ಉಲ್ಲೇಖವಿದ್ದು ಮಹಾರಾಷ್ಟ್ರದ ಕವಿಗಳಾದ ವಾಮನ ಪಂಡಿತ, ರಾಮದಾಸ ಪಂಡಿತ ಮೊದಲಾದವರ ಬರಹಗಳಲ್ಲಿ ಇವರ ಉಲ್ಲೇಖವಿದೆ.
- ಶಿವಾಜಿ ಮಹಾರಾಜರ ಕಾಲದಲ್ಲಿ ಮೊಘಲರ ಆಕ್ರಮಣವನ್ನು ತಪ್ಪಿಸಲು ಗೊಂದಲಿಗರು ಭಿಕ್ಷುಕರ ರೂಪದಲ್ಲಿ ಗೂಢಾಚಾರರಾಗಿ ಮೊಘಲರ ರಾಜ್ಯದಲ್ಲಿ ಸುದ್ದಿ ಸಂಗ್ರಹಿಸುತ್ತಿದ್ದರಂತೆ. ಹೀಗೆ ಗೂಢಾಚಾರಿಕೆ ಮಾಡುತ್ತಿದ್ದ ಗೊಂದಲಿಗರಿಗೆ ಶಿವಾಜಿಯ ಬೆಂಬಲವಿತ್ತು.
- ಹಿಂದೆ ಮೊಘಲರ ರಾಜಧಾನಿ ಬಿಜಾಪುರವಾಗಿದ್ದಾಗ ಗೂಢಾಚಾರಿಕೆ ಜೊತೆಗೆ ಭಿಕ್ಷಾಟನೆ ಮಾಡುತ್ತಿದ್ದ ಗೊಂದಲಿಗರು ಕರ್ನಾಟಕದ ಭಾಗದಲ್ಲಿ ಉಳಿದು ಹೋದರು. ಮುಂದೆ ಬೇರೆ ಬೇರೆ ಕಡೆ ಬಿಡಿ ಬಿಡಿಯಾಗಿ ಉಳಿದರು.
- ಕರ್ನಾಟಕದಲ್ಲಿ ಬಿಜಾಪುರ, ಬೀದರ್, ಗುಲ್ಬರ್ಗಾ, ಬೆಳಗಾವಿ, ರಾಯಚೂರು, ಧಾರವಾಡ, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಹಾಗೇ ಮಂಡ್ಯ, ಮೈಸೂರು ಭಾಗಗಳಲ್ಲಿ ಕೆಲವೆಡೆ ಇದ್ದರು.
- ಮೊದಲಿಗೆ ಯಾವುದೇ ಜಾತಿಯ ಆಸಕ್ತರು ಗೊಂದಲಿಗರಾಗಿ ಸೇರ್ಪಡೆಗೊಳ್ಳುತ್ತಿದ್ದು ಕ್ರಮೇಣ ಉಳಿದ ಜಾತಿಗಳಿಂದ ಇಲ್ಲಿಗೆ ಸೇರ್ಪಡೆಯಾಗಲು ವಿರೋಧ ಬಂದದ್ದರಿಂದ ಗೊಂದಲಿಗರದ್ದೇ ಒಂದು ಜಾತಿಯಾಗಿ

ಮಾರ್ಪಾಡಾಗಿದೆ.

- ಗೊಂದಲ ಶಬ್ದದ ಮೂಲ ಪ್ರಾಕೃತ. ಇಲ್ಲಿ ಗೊಂದಲ, ಗುಂದಲ್ ಎಂಬ ರೂಪಗಳಿದ್ದು ಆನಂದದ ಧ್ವನಿ, ಹರ್ಷದ ತುಮುಲ ಧ್ವನಿ ಎಂಬ ಅರ್ಥ ಹೊಂದಿದೆ. ಮರಾಠಿ ಭಾಷೆಯಲ್ಲಿ ಗೊಂಧ್ಹಳ್ ಎಂಬ ರೂಪದಲ್ಲಿದ್ದು ದೇವಿ ಖಂಡೋಬಾಗೆ ಸಂಬಂಧಿಸಿದ ಧಾರ್ಮಿಕ ವಿಧಿ, ಗಡ್ಬಡ್, ಅವ್ಯವಸ್ಥಾ, ಅಂದಾದುಂದೀ ಹಾಗೂ ವಾದ್ಯಗಳ ಧ್ವನಿ ಎಂಬ ಅರ್ಥ ಹೊಂದಿದೆ.

- ಈ ಮೂಲಕ ಪ್ರಾಕೃತದ ಶಬ್ದ ಮರಾಠಿಯಲ್ಲಿ ಬೇರೆ ಬೇರೆ ರೂಪದಲ್ಲಿ ಕಾಣಿಸಿಕೊಂಡು ಅಂತೆಯೇ ಕನ್ನಡದೊಳಗು ಪ್ರವೇಶಿಸಿದೆ.

- ಗೊಂದಲ ಎಂಬುದು ಒಂದು ಪೂಜಾ ವಿಧಾನ. ತಾಯಿ ಅಂಬಾ ಭವಾನಿಯ ಮುಂದೆ ರಾತ್ರಿಯಿಡೀ ಕಥೆ ಹಾಡುತ್ತ ಕುಣಿಯುತ್ತ ಅಭಿನಯಿಸುತ್ತ ದೇವಿ ಸ್ತುತಿ ಮಾಡುವುದೇ ಈ ಪೂಜಾ ವಿಧಾನ. ಇದನ್ನು 'ಗೊಂದಲ ಹಾಕುವುದು' ಎನ್ನುತ್ತಾರೆ. ಹೀಗಾಗಿ ಗೊಂದಲ ಹಾಕುವವರೆ ಗೊಂದಲಿಗರಾಗಿದ್ದಾರೆ.

ಈ ಮೇಲಿನ ಎಲ್ಲಾ ವಿಚಾರಗಳನ್ನು ಆಧರಿಸಿ ಕ್ಯಾತನಹಳ್ಳಿ ರಾಮಣ್ಣ ಅವರು ಗೊಂದಲಿಗರು ಹಾಡಿಕೆ ನರ್ತನಗಳನ್ನು ನಡೆಸುತ್ತಿದ್ದ ಸಂಚಾರಿ ಕವಿಗಳೆಂದು, ವೃತ್ತಿಗಾಯಕರೆಂದು ತಿಳಿಸುತ್ತ ಇವರು ಮಹಾರಾಷ್ಟ್ರದವರೆಂದು ಸ್ಪಷ್ಟಪಡಿಸುತ್ತಾರೆ.

ಇವರ ಈ ವಾದವನ್ನು ಜ್ಯೋತಿ ಹೊಸೂರ ಅವರು ಟೀಕಿಸಿದ್ದಾರೆ. ಗೊಂದಲಿಗರು ಕರ್ನಾಟಕದವರು ಎನ್ನುವ ಇವರು ರಾಮಣ್ಣ ಅವರು ಸರಿಯಾದ ಜ್ಞಾನವಿಲ್ಲದೆ ಗೊಂದಲಿಗರು ಮರಾಠಿಗರು ಎಂದು ಹೇಳಿದ್ದಾರೆ ಎನ್ನುತ್ತಾರೆ. ಈ ಬಗ್ಗೆ ಹೊಸೂರರ ಟೀಕೆಗಳನ್ನೆಲ್ಲ ಪ್ರಸ್ತಾಪಿಸಿ ಇವರ ಟೀಕೆಗಳಿಗೆ ಆಧಾರವೇ ಇಲ್ಲವೆಂಬುದನ್ನು ರಾಮಣ್ಣ ಅವರು ಮೇಲಿನ ವಿಚಾರಗಳಿಂದ ಸಾಬೀತು ಮಾಡಿದ್ದಾರೆ. ಹಾಗೆಯೇ ಜ್ಯೋತಿ ಹೊಸೂರರ ವಾದವನ್ನು ಬೆಂಬಲಿಸುವ ನಿಂಗಣ್ಣ ಸಣ್ಣಕ್ಕಿ ಎಂಬುವವರ ಸಂಶೋಧನೆಯ ಹಾದಿಯು ಬೇಜವಾಬ್ದಾರಿಯಿಂದ ಕೂಡಿದೆ ಎಂದು ಟೀಕಿಸುತ್ತಾರೆ.

ಗೊಂದಲಿಗರ ಮೂಲ, ಅರ್ಥ, ಪೂಜಾ ವಿಧಾನವನ್ನು ಸಂಶೋಧಿಸಿರುವ ರಾಮಣ್ಣ ಅವರು ಗೊಂದಲಿಗರ ಜೀವನ ವಿಧಾನವನ್ನು ವಿವರಿಸಿದ್ದಾರೆ. ಗೊಂದಲಿಗರು ದೀಕ್ಷೆ ಪಡೆಯುವ ವಿಧಾನ, ಅವರು ಕೈಗೊಳ್ಳುವ ಯಾತ್ರೆ, ಉಡುಗೆ-ತೊಡುಗೆ, ಆಹಾರ, ಹುಟ್ಟು, ಸಾವು, ಮದುವೆ, ಋತುಮತಿಯರಾದಾಗಿನ ಆಚರಣೆ, ನ್ಯಾಯದ ವಿಧಾನಗಳನ್ನು ವಿವರಿಸುತ್ತಾರೆ. ಇವರು ಹಿಂದೂ ಧರ್ಮಕ್ಕೆ ಸೇರಿದವರಾಗಿದ್ದು ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವುದರೊಟ್ಟಿಗೆ ದಸರಾ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಹಾಗೆಯೇ ಮೊಹರಂ ಹಬ್ಬವನ್ನು ಕೂಡ ಆಚರಿಸುತ್ತಾರೆಂದು ತಿಳಿಸಿದ್ದಾರೆ.

ಗೊಂದಲಿಗರು ಕಥೆ ಹೇಳುವಾಗ ಇಡೀ ರಾತ್ರಿ ದೇವಿ ಅಂಬಾ ಭವಾನಿಯ ಕಥೆಯನ್ನುಳಿದು ಉಳಿದಂತೆ – ಸತಿ ಸುಲೋಚನೆ, ಅಡವಿ ಕುಮಾರ, ಬಾಳಾವತಿ

ಮುಂತಾದ ಕಥೆಗಳನ್ನು ಹೇಳಬಲ್ಲವರಾಗಿದ್ದಾರೆ. ರಾಮಣ್ಣ ಅವರು ಈ ಕಥೆಗಳ ಆಶಯವನ್ನೆಲ್ಲ ಸಂಗ್ರಹಿಸಿ ವಿವರಿಸಿರುವದು ಜನಪದರ ಬದುಕಿನ ತಿರುಳನ್ನು ಅರ್ಥೈಸುವಂತಿದೆ. ಕಥೆ ಹೇಳುವಾಗ ಚೌಡಿಕೆಯನ್ನು, ಸಂಬಾಳ ಎಂಬ ವಾದ್ಯ – ಜೋಡಿ ತಬಲಗಳನ್ನು ಬಳಸುವುದು ವಿಶೇಷ.

ಗೊಂದಲಿಗರು ಹಾಗೂ ಗೊಂದಲ ಹಾಕುವ ಬಗೆಯಲ್ಲಿ 3 ರೀತಿಗಳಿದ್ದು 32ಜನರ ತಂಡ ಉತ್ತಮವೆಂದು, 16 ಜನರ ತಂಡ ಮಧ್ಯಮವೆಂದು, 8 ಜನರ ತಂಡ ಕನಿಷ್ಠವೆಂದು ಸ್ಪಷ್ಟವಾಗಿ ಗೊಂದಲದ ಪ್ರಕಾರಗಳನ್ನು ತಿಳಿಸಿದ್ದಾರೆ. ಗೊಂದಲಿಗರು ಯಾರೆಂದು ಸ್ಪಷ್ಟಪಡಿಸುವಾಗ ಗೊಂದಲಿಗರು, ಭೂತೇರು, ಜೋಗೇರು, ಜೋಳೇಗೇರು, ಚೌಡಿಕೆಯವರ ನಡುವೆ ಗೊಂದಲಗಳಿದ್ದು ಅವರ ನಡುವಿನ ವ್ಯತ್ಯಾಸಗಳನ್ನು ತಿಳಿಸಿ ಗೊಂದಲಿಗರು ಇವರೆಲ್ಲರಿಗಿಂತ ಭಿನ್ನ ಎಂದು ಹೇಳಿದ್ದಾರೆ. ಈ ಮೂಲಕ ಗೊಂದಲಿಗರ ಬಗ್ಗೆ ಗೊಂದಲಗಳೇ ಇಲ್ಲದ ಹಾಗೆ ಅಧ್ಯಯನ ನಡೆಸಿದ್ದಾರೆ. ಗೊಂದಲ ಶಬ್ದದ ವ್ಯುತ್ಪತ್ತಿ, ಗೊಂದಲಿಗರ ಮೂಲ ಸ್ಥಳದ ಬಗ್ಗೆ ಖಚಿತವಾಗಿ ಮಾತನಾಡಿದ್ದಾರೆ.

ಸಂಶೋಧನೆ ಎಂಬುದು ಹೊಸದನ್ನು ಕಂಡುಹಿಡಿಯಲು ಮಾತ್ರ ಸೀಮಿತವಾದುದಲ್ಲ. ಈಗಾಗಲೇ ಸಂಗ್ರಹಿಸಿರುವ ವಸ್ತು ವಿಷಯಗಳನ್ನೇ ಹೊಸ ದೃಷ್ಟಿಯಿಂದ ವಿಶ್ಲೇಷಿಸಿ ಅದಕ್ಕೆ ಸಾಕ್ಷ್ಯಾಧಾರಗಳ ಬೆಂಬಲದಿಂದ ಅರ್ಥೈಸುವದು ಸಹ ಸಂಶೋಧನೆಯೆ. ಈ ನಿಟ್ಟಿನಲ್ಲಿ ಕ್ಯಾತನಹಳ್ಳಿ ರಾಮಣ್ಣ ಅವರು ಗೊಂದಲಿಗರ ಬಗ್ಗೆ ಹಲವು ಅಧ್ಯಯನಗಳಿದ್ದರೂ ಅವುಗಳಿಗಿಂತ ಭಿನ್ನ ಫಲಿತಾಂಶ ನೀಡುವ ಅಂದರೆ ಗೊಂದಲಿಗರ ಮೂಲ ಮರಾಠಿಗರು–ಮಹಾರಾಷ್ಟ್ರದವರು. ಕ್ರಮೇಣ ಉತ್ತರ ಕರ್ನಾಟಕ ಭಾಗದಲ್ಲಿ ವಲಸೆ ಬಂದು ಇಲ್ಲಿಯವರಾಗಿದ್ದಾರೆ ಎಂಬುದನ್ನು ಈ ಅಧ್ಯಯನದಿಂದ ಸ್ಪಷ್ಟವಾಗಿ ತಿಳಿಸಿದ್ದಾರೆ.

**ಕೊಂತಿ ಪೂಜೆ : ಒಂದು ಅಧ್ಯಯನ**

ಜಾನಪದವು ನದಿಯ ಹಾಗೆ. ಎಲ್ಲೋ ಹುಟ್ಟಿ ಬೆಳೆದು ತನಗೆ ಕೂಡಿಕೊಂಡಿದ್ದನ್ನೆಲ್ಲ ಅರಗಿಸಿಕೊಂಡು ವಿಸ್ತಾರವಾಗಿ, ಸಮೃದ್ಧವಾಗಿ ಹರಿಯುತ್ತದೆ. ಈ ಹರಿವು ಪ್ರದೇಶವಾರು ವೈವಿಧ್ಯಮಯವಾಗಿರುತ್ತದೆ. ಹಾಡಿನಲ್ಲಿ, ಕಥೆಯಲ್ಲಿ, ಕುಣಿತದಲ್ಲಿ, ಆಚರಣೆಯಲ್ಲಿ ಭಿನ್ನ ಭಿನ್ನ ರೂಪಗಳನ್ನು ಪಡೆಯುತ್ತದೆ. ಗೊಂದಲಿಗರು ವೃತ್ತಿ ಗಾಯಕರಾಗಿದ್ದು ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ನೆಲೆ ನಿಂತ ಬಗೆಯನ್ನು ತಿಳಿಸುವ ರಾಮಣ್ಣ ಅವರು ಕರ್ನಾಟಕದೊಳಗೆ ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲಿ ಆಚರಿಸುವ ಕೊಂತಿ ಪೂಜೆಯ ಬಗ್ಗೆಯೂ ಅಧ್ಯಯನ ನಡೆಸಿದ್ದಾರೆ. ಈ ಮೊದಲು ಮಂಡ್ಯ ಜಿಲ್ಲೆಯ ಕೊಂತಿ ಪೂಜೆಯ ಬಗ್ಗೆ ಡಿ ಲಿಂಗಯ್ಯ ಅವರು ಅಧ್ಯಯನ ನಡೆಸಿದ್ದಾರೆ. ಎಂ ಆರ್ ಲಕ್ಷ್ಮಮ್ಮ ಅವರ ಕೊಂತಮ್ಮನ ಪದಗಳು, ಕುಂತೀದೇವಿ ಲೇಖನಗಳು ಸಹ ಪ್ರಕಟಗೊಂಡಿವೆ. ಇವುಗಳ ಹೊರತಾಗಿ ರಾಮಣ್ಣ ಅವರು ಕೊಂತಿ ಪೂಜೆಯ ಬಗ್ಗೆ ವಿಸ್ತಾರವಾದ ಅಧ್ಯಯನ

ನಡೆಸಿದ್ದಾರೆ.

ಮಹಾಕಾವ್ಯವಾದ ಮಹಾಭಾರತದಲ್ಲಿ ಕುಂತಿ ಭೋಜನ ಸಾಕುಮಗಳು, ಪಾಂಡು ರಾಜನ ಹೆಂಡತಿ, ಪಾಂಡವರ ತಾಯಿ ಆದ ಕುಂತಿದೇವಿಯನ್ನು ಜನಪದರು ಕುಂತಿ, ಕೊಂತಿ ಎಂದು ಕರೆಯುತ್ತಾರೆ. ಕೊಂತಿಯು ತನ್ನ ಬದುಕಿನಲ್ಲಿ ಕಂಡುಂಡ ಕಷ್ಟ-ನಷ್ಟಗಳಿಂದ ಸುಖವನ್ನೇ ಕಾಣದವಳು. ರಾಜನ ಮಗಳು, ರಾಜನ ಹೆಂಡತಿಯಾಗಿಯೂ ಕಾಡುಪಾಲಾಗಿ ವನವಾಸವನ್ನನುಭವಿಸಿದವಳು. ಹೀಗೆ ಸಾಮಾನ್ಯ ಬದುಕನ್ನೇ ಕಂಡ ಕುಂತಿ ಆದರ್ಶ ಸತಿಯಾಗಿ, ತಾಯಿಯಾಗಿ ಜನಸಾಮಾನ್ಯರ ಮನಸಲ್ಲಿ, ಬದುಕಲ್ಲಿ ಸ್ಥಾನ ಪಡೆದದ್ದರ ಪರಿಣಾಮವೇ ಕೊಂತಿ ಪೂಜೆ.

ರಾಮಣ್ಣ ಅವರು ಕೊಂತಿ ಪೂಜೆಯ ಬಗೆಗೆ ಸಮಗ್ರ ಅಧ್ಯಯನ ನಡೆಸಿ ಕೊಂತಿ ಪೂಜೆಯ ಹಿನ್ನೆಲೆ, ನಂಬಿಕೆ, ಆಚರಣೆಗಳನ್ನು ಕುರಿತು ವಿವರಗಳನ್ನು ನೀಡಿದ್ದಾರೆ. ಹಾಗೇ ಕೊಂತಿ ಪದಗಳನ್ನು ಸಂಗ್ರಹಿಸಿದ್ದಾರೆ.

**ಕೊಂತಿ ಪೂಜೆ: ರಾಮಣ್ಣ ಅವರ ನಿಲುವುಗಳು**

ಕೊಂತಿ ಪೂಜೆ ಎಂಬುದು ಒಂದು ಆರಾಧನೆ. ಆರಾಧನೆಯೆಂಬುದು ದೈವ ಅಥವಾ ಧಾರ್ಮಿಕ ಸಂಬಂಧವಾಗಿ ಮಾತ್ರ ಇರುವುದಿಲ್ಲ. ಜನಪದ ಬದುಕಿಗೆ ಸಂಬಂಧ ಹೊಂದಿದ ವಸ್ತುಗಳು ಅಥವಾ ಸಂಬಂಧಗಳು ಸಹ ಆರಾಧನೆಯಾಗುತ್ತವೆ. ಕೊಂತಿಪೂಜೆ ಒಂದು ಮಂಗಳಕಾರ್ಯ. ಇದನ್ನು ಆಚರಿಸುವವರು ಮುಖ್ಯವಾಗಿ ಮಹಿಳೆಯರು.

**ಹಿನ್ನೆಲೆ : ಕೊಂತಿ ಪೂಜೆಯ ಹಿಂದೆ ಹಲವು ನಂಬಿಕೆಗಳು ಇವೆ.**

ಕೊಂತಿಯ ಅಕ್ಕಳಾದ ಗಾಂಧಾರಿಯು 'ನೋಂಪಿ ಹಬ್ಬ'ವನ್ನು ಆಚರಿಸುವಾಗ ಊರಿನ ಎಲ್ಲರನ್ನೂ ಕರೆದು ಕೊಂತಿಯನ್ನು ಹೊಟ್ಟೆಕಿಚ್ಚಿನಿಂದ ಕರೆಯುವುದಿಲ್ಲ. ಪರಿಣಾಮವಾಗಿ ಕೊಂತಿಯು ಸಹ ತಾನು ಈ ಹಬ್ಬವನ್ನು ಮಾಡಬೇಕೆಂದು ತನ್ನ ಮಕ್ಕಳಾದ ಪಾಂಡವರ ಬಳಿ ಹೇಳಿದಾಗ ಅರ್ಜುನ ತನ್ನ ತಂದೆಯಾದ ದೇವೇಂದ್ರನಿಂದ ಸ್ವರ್ಗ ಲೋಕದ ಐರಾವತ, ಕಾಮಧೇನು, ಕಲ್ಪವೃಕ್ಷ ಸಮೇತವಾಗಿ ಎಲ್ಲವನ್ನೂ ತರಿಸಿ ಬಡವ ಬಗ್ಗರೆಲ್ಲರೂ ಮೆಚ್ಚುವಂತೆ ವಿಜೃಂಭಣೆಯಿಂದ ಹಬ್ಬ ಮಾಡಿಸುತ್ತಾನೆ. ಹೀಗೆ ಕೊಂತಿ ಮಾಡಿದ ಪೂಜೆಯ ಕಾರಣದಿಂದ ಸಾಮಾನ್ಯರು ಕೊಂತಿಪೂಜೆಯನ್ನು ಉಳಿಸಿಕೊಂಡು ಬಂದರು.

ಕೊಂತಿಯ ಕಷ್ಟಸಹಿಷ್ಣು ವ್ಯಕ್ತಿತ್ವವು ಲೋಕ ಮೆಚ್ಚುಗೆಯಾದ್ದರಿಂದಲೂ ಆಕೆಯಂತೆ ತಾವು ಆಗಬೇಕೆಂದು ಬಯಸುವ ಮಹಿಳೆಯರಿಂದ ಕೊಂತಿಪೂಜೆಯ ಆಚರಣೆ ಇದೆ. ಹಾಗೆಯೇ ಮಕ್ಕಳಾಗಲಿ ಎಂದು, ಶುಭವಾಗಲಿ ಎಂದು, ಕಂಕಣ ಕೂಡಿ ಬರಲಿ ಎಂದು ಪೂಜಿಸುತ್ತಾರೆ.

ಹಿಂದೆ ಮೈನೆರೆಯದ ಹುಡುಗಿಯರಿಗೆ ಬಾಲ್ಯ ವಿವಾಹವಾಗುತ್ತಿದ್ದ ಕಾರಣ ಆ ಹುಡುಗಿಯರು ತವರು ಮನೆಗೆ ಮರಳಿ ಮೈನೆರೆದ ಮೇಲೆ ಗಂಡನ ಮನೆಗೆ ಹೋಗುತ್ತಿದ್ದ ಹಿನ್ನೆಲೆಯಲ್ಲಿ ಪೂಜಿಸುತ್ತಾರೆ. ಅಂದರೆ ಮೈನೆರೆದ ಹುಡುಗಿಯರಿಗೆ ಗುಡ್ಡುವಿನಲ್ಲಿ ಕೂರಿಸಿ ಶಾಸ್ತ್ರ ಮಾಡುತ್ತಾರೆ. ಹದಿನಾರು ದಿನಗಳ ಅವಧಿಯ ಮೊದಲ ದಿನ ಕೊಂತಿ ಮೈನೆರೆದ ದಿನ ಎಂದು ನಂಬುತ್ತಾರೆ. ಗುಡ್ಡು ಮತ್ತು ಕಲ್ಲು ಗುಂಡುಗಳು ಲೈಂಗಿಕ ಸಂಕೇತಗಳಾಗಿರಬಹುದೆಂಬ ಡಿ ಲಿಂಗಯ್ಯ ಅವರ ಅಭಿಪ್ರಾಯವನ್ನು ರಾಮಣ್ಣ ಅವರು ಅನುಮೋದಿಸುತ್ತಾರೆ. ಕೊಂತಿಯು ಪ್ರಜನನ ದೇವತೆ ಎಂದು ಜನರ ನಂಬಿಕೆ ಎಂದು ತಿಳಿಸುತ್ತಲೇ ಆಕೆ ಪ್ರಜನನಕ್ಕಿಂತ ಫಲವತ್ತತೆಯ ಸಂಕೇತ ಎಂದು ತಿಳಿಸುತ್ತಾರೆ.

**ಆಚರಣೆ:**

ಕಾರ್ತಿಕ ಮಾಸದಲ್ಲಿ ದೀಪಾವಳಿ ಮುಗಿದ ಮೇಲೆ ಒಂದು ತಿಂಗಳ ಕಾಲ ಕೊಂತಿಪೂಜೆ ಆಚರಿಸಲಾಗುತ್ತದೆ. ಕೊಂತಿ ಮುಟ್ಟಿದ್ದೆಲ್ಲ ಶುಭ, ಸಮೃದ್ಧ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ಪೂಜೆಯನ್ನು ಆಚರಿಸಲಾಗುತ್ತದೆ. ಕನಿಷ್ಠ ಮೂರು ದಿನಗಳು ಗರಿಷ್ಠ ನಲವತ್ತೈದು ದಿನಗಳವರೆಗೆ ತಿಂಗಳಿನಲ್ಲಿ ಯಾವಾಗ ಬೇಕಿದ್ದರೂ ಮಾಡಬಹುದಾಗಿದೆ.

**ಕೊಂತಿಪೂಜೆಯಲ್ಲಿ ಮುಖ್ಯವಾಗಿ ಬರುವ ಆಚರಣೆಗಳು ಮುಂದಿನಂತಿವೆ:**

- ಲೆಗ್ಗೆ ಅಥವಾ ಲಗೋರಿ ಆಟ: ಕೊಂತಿಪೂಜೆಗಿಂತ ಮೂರು ದಿನಗಳ ಮೊದಲು, ಕೆಲವೊಮ್ಮೆ ಐದು ದಿನಗಳ ಮೊದಲು ಹುಡುಗರು ಈ ಆಟವನ್ನು ಆರಂಭಿಸುತ್ತಾರೆ.
- ಕೊಂತಿ ಕಲ್ಲು: ಕೊಂತಿಯೆಂದು ಭಾವಿಸಿ ಕಲ್ಲುಗಳನ್ನು ನೆಲಕ್ಕೆ ಹೂಡುತ್ತಾರೆ. ಇದು ತ್ರಿಕೋನಾಕಾರದ ಕಲ್ಲು ಆಗಿರುತ್ತದೆ. ಹಾಗೆಯೇ ಖಾರ ಕಡೆಯುವ ಕಲ್ಲಿನಾಕಾರದ ಕಲ್ಲನ್ನು ಕೊಂತಿ ಎಂದು ಪ್ರತಿಷ್ಠಾಪಿಸುತ್ತಾರೆ. ಕೊಂತಿ ಕೂರಿಸುವ ಜಾಗ ಶುಚಿಯಾಗಿದ್ದು ಎಕ್ಕದ ಎಲೆಗಳನ್ನು ಹಾಸಿ ಸಿದ್ಧಮಾಡಲಾಗುತ್ತದೆ.
- ಕೊಂತಿ ಹಂತ: ಗೋಡೆಗೊರಸಿದಂತೆ ಕಲ್ಲುಗಳನ್ನು ಇಟ್ಟು ಅದರ ಮೇಲೆ ಕೊಂತಿ ಪೂಜಿಸುವುದು.
- ಕತ್ಲೆ ಕೊಂತಿ: ಕೊಂತಿಪೂಜೆಯ ಅನಂತರ ದೀಪ ಹಚ್ಚುವುದಿಲ್ಲ. ಇದೇ ಕತ್ಲೆ ಕೊಂತಿ.
- ಅಲಂಕಾರ: ಕೊಂತಿ ಕಲ್ಲಿಗೆ ಮುಖವನ್ನು ತಿದ್ದಿ ಅವರಿಕೆ ಹೂವುಗಳಿಂದ ಅಲಂಕಾರ ಮಾಡಲಾಗುತ್ತದೆ. ಕೆಲವೆಡೆ (ಗುಂಡ್ಲುಪೇಟೆಯ ಹೊರೆಯಾಲ) ಜೋಡಿಕಲ್ಲುಗಳನ್ನು ಇಟ್ಟು ಅಲಂಕರಿಸುತ್ತಾರೆ. ದೊಡ್ಡ ಕಲ್ಲು ಕೊಂತಿ ಎಂದು, ಚಿಕ್ಕ ಕಲ್ಲು ಕೊಂತಿ ತಂಗಿ(ಮಾದ್ರಿ) ಎಂದು ಪೂಜಿಸುತ್ತಾರೆ.

- ಗುಡಿದುಂಬುವುದು: ಇದು ಕೊಂತಿ ಪೂಜೆಯ ಕಡೆಯ ದಿನದ ಆಚರಣೆ. ಪೂಜೆಗೊಂಡ ಕೊಂತಿ ಕಲ್ಲಿನ ಜೊತೆಗೆ ಮಣ್ಣಿನಿಂದ ಹೆಣ್ಣು ಗೊಂಬೆ ಮಾಡಿ, ಅಲಂಕರಿಸಿ ತಮಟೆ, ಕಳಸದ ಜೊತೆಗೆ ಊರಿನ ಮಾರಮ್ಮನ ಗುಡಿಗೆ ಒಯ್ದು ಪ್ರಸಾದ ಹಂಚಲಾಗುತ್ತದೆ. ಅನಂತರ ಮಹಿಳೆಯರು ಸೋಗಲು ಹುಯ್ದು ಮೆರವಣಿಗೆ ಮಾಡುತ್ತಾರೆ.
- ವಿಸರ್ಜನೆ: ಮೆರವಣಿಗೆಯಲ್ಲಿ ಮೂಲ ಕೊಂತಿಕಲ್ಲಿನ ಜೊತೆಗೆ ಮಣ್ಣಿನ ಗೊಂಬೆಯನ್ನು ಹೊತ್ತೊಯ್ದು ಊರಿನ ಮೂಡಲ ದಿಕ್ಕಿನ ಹುಚ್ಚೆಳ್ಳು ಹೊಲದಲ್ಲಿ ಮಣ್ಣಿನ ಗೊಂಬೆಯನ್ನು ವಿಸರ್ಜಿಸಿ ಬರುತ್ತಾರೆ (ಬೇರೆ ಯಾವುದೇ ಹೊಲದಲ್ಲಿ ಕೂಡ ವಿಸರ್ಜಿಸಬಹುದು. ಆದರೆ, ಕೊಂತಿಗೆ ಹುಚ್ಚೆಳ್ಳು ಹೂವು ಇಷ್ಟವಾದ ಕಾರಣ ಅದಕ್ಕೆ ಆದ್ಯತೆ).

ಈ ಮೇಲ್ಕಂಡ ಹಂತಗಳು ಕೊಂತಿಪೂಜೆಯಲ್ಲಿ ಇರುವ ಆಚರಣೆಗಳು. ಆದರೆ ಕೆಲವು ಪ್ರದೇಶಗಳಲ್ಲಿ ಹಾಗೂ ಜನಾಂಗದವರಲ್ಲಿ ಈ ಆಚರಣೆಗಳು ಬದಲಾಗುವುದನ್ನು ರಾಮಣ್ಣ ಅವರು ತಿಳಿಸುವುದು ವಿಶೇಷ.

ಉಪ್ಪಾರರು ಮಣ್ಣಿನ ಗೊಂಬೆಯನ್ನು ತುಂಬಿದ ಕೊಳಗದ ಮೇಲಿರಿಸಿ ಪೂಜಿಸಿ ಹುರುಳಿ ಹೊಲದಲ್ಲಿ ವಿಸರ್ಜಿಸುತ್ತಾರೆ. ನಾಯಕರು ಮಣ್ಣಿನ ಗೊಂಬೆಯ ಬದಲು ಬೆಳ್ಳಿಯ ಮೂರ್ತಿ ಇಡುತ್ತಾರೆ. ವಿಸರ್ಜನೆಯ ಸಮಯದಲ್ಲಿ ಹೂಗಳನ್ನು ಮಾತ್ರ ಬಿಡುತ್ತಾರೆ. ಕುರುಬರು ಉತ್ತರ ಕರ್ನಾಟಕದ ದೈವ ಎಲ್ಲಮ್ಮನನ್ನು ಪೂಜಿಸುವಂತೆ ಕೊಂತಿಯನ್ನು ಪೂಜಿಸುತ್ತಾರೆ. ಕುಂಬಾರರು ಮತ್ತು ಕುರುಬರು ಹಾಲ್ಗೊಳ – ನೀರ್ಗೊಳ ಎಂಬ ಸಗಣಿ ಗೋಡೆಯ ಕೊಳ ಮಾಡಿ ಕಡೆಗೆ ಅವೆರಡು ಬೆರೆಯುವಂತೆ ಮಧ್ಯದ ಗೋಡೆಯನ್ನು ಒಡೆಯುತ್ತಾರೆ. ಇವರಲ್ಲಿ ಕೊಂತಿಯ ವಿಸರ್ಜನೆ ಹೊಲದ ಬದಲಿಗೆ ನೀರಿನಲ್ಲಾಗುತ್ತದೆ. ಹತ್ತಿರದ ಹೊಳೆ, ಕೆರೆ, ಬಾವಿ ಯಾವುದರಲ್ಲಾದರೂ ಆಗುತ್ತದೆ.

ಗುಂಡ್ಲುಪೇಟೆಯ ಹೊರೆಯಾಲದಲ್ಲಿ ಮಣ್ಣಿನ ಗೊಂಬೆಯೇ ಇರುವುದಿಲ್ಲ. ಕುಕ್ಕೆಯಲ್ಲಿ ಕೊಂತಿ ಕಲ್ಲುಗಳನ್ನೇ ಹೊತ್ತೊಯ್ದು ಹೊಲದಲ್ಲಿಟ್ಟು ಮಾರನೆ ಬೆಳಿಗ್ಗೆ ಹೂವನ್ನು ಚೆಲ್ಲಿ ಕಲ್ಲುಗಳನ್ನು ಮರಳಿ ತರುತ್ತಾರೆ.

ಕಡೆಯ ದಿನ ಕೊಂತಿ ಹಾಗೂ ಪಾಂಡುವಿನ ಮಣ್ಣಿನ ದೊಡ್ಡ ವಿಗ್ರಹಗಳನ್ನು ಮಾಡಿ ಇಬ್ಬರು ಹುಡುಗರಿಗೆ ಗಂಡು ಹೆಣ್ಣಿನ ವೇಷ ಹಾಕಿ ವಿಗ್ರಹಗಳನ್ನು ಹೊರಿಸಿ ಊರ ಹೊರಗಿನ ಹೊಲದಲ್ಲಿ(ರಾಗಿ/ನವಣೆ ಹೊಲ) ಆ ವಿಗ್ರಹಗಳನ್ನು ಇರಿಸಿ ಒಸಗೆ ಶಾಸ್ತ್ರ ಮಾಡಿ ಮನೆಗೆ ತೆರಳುತ್ತಾರೆ.

ವಿಸರ್ಜನೆಯಾದ ಮೇಲೆ ಮಣ್ಣಿನ ಗೊಂಬೆಯನ್ನು – ಕೊಂತಿಯನ್ನು ಮುರಿದು ಮುರಿದು ಹಂಚಿಕೊಂಡು ಆ ಸ್ವಲ್ಪ ಮಣ್ಣನ್ನು ತಮ್ಮ ಹೊಲಗಳಿಗೆ ಹಾಕಿಕೊಳ್ಳುತ್ತಾರೆ. ಕೊಂತಿ ಎಂದು ಪೂಜಿಸಿದ ಗೊಂಬೆಯ ಮಣ್ಣಿನಿಂದ ತಮ್ಮ

ಹೊಲ ಫಲವತ್ತಾಗುತ್ತದೆಂಬ ನಂಬಿಕೆಯಿಂದ ಕೊಂತಿ ಫಲವತ್ತತೆಯ ದೇವತೆಯಾಗುತ್ತಾಳೆ.

ಕೊಂತಿಪದ: ಕೊಂತಿಪೂಜೆ ರಾತ್ರಿಯಿಡೀ ನಡೆಯುವುದರಿಂದ ಪದಗಳು ರಾತ್ರಿಪೂರ ಇರುತ್ತವೆ. ಹೀಗೆ ಹಾಡಿನ ಮಧ್ಯ ಬೇಸರ ಕಳೆಯಲು ಪಡ್ಡೆ ಹುಡುಗರು, ದೊಡ್ಡವರೂ ವಿವಿಧ ವೇಷಗಳನ್ನು ಹಾಕಿ ಜನರನ್ನು ರಂಜಿಸುತ್ತಾರೆ.

ಕೊಂತಿಪದಗಳು ಕೊಂತಿಯ ಹಂತ ಹಂತವಾದ ಜೀವನವನ್ನು ಅದರ ಸ್ಥಿತಿಗತಿಯನ್ನು ತಿಳಿಸುವಂತೆಯೇ ಇವೆ. ಕೊಂತಿಯ ಬಾಲ್ಯ, ಮದುವೆ, ತಾಯ್ತನ, ವನವಾಸಗಳು ಮುಖ್ಯವಾಗಿ ಚಿತ್ರಣಗೊಳ್ಳುತ್ತವೆ. ಹೀಗೆ ಕೊಂತಿಯ ಬದುಕನ್ನು ಚಿತ್ರಿಸುವಾಗ ಹಾಡುಗಳು ಹಿಂದು ಮುಂದಾಗುತ್ತವೆ. ಇದು ಸಹಜ ಎಂಬುದು ರಾಮಣ್ಣ ಅವರ ಅಭಿಪ್ರಾಯ. ತ್ರಿಪದಿಗಳಲ್ಲಿರುವ ಈ ಹಾಡುಗಳು ಪುನರಾವರ್ತನೆ ಆಗುತ್ತವೆ ಎಂದು ತುಂಡರಿಸಿ ಹಾಡಿದರೆ ಹಾಡಿನ ಸರಾಗತೆಯೆ ಹೋಗಿ ದೋಷವುಂಟಾಗುತ್ತದೆಂಬ ವಿಚಾರವನ್ನು ರಾಮಣ್ಣ ಅವರು ಇಲ್ಲಿ ತಿಳಿಸುತ್ತಾರೆ.

ಹೀಗೆ ಕೊಂತಿ ಪೂಜೆಯನ್ನು ಕರ್ನಾಟಕಾದ್ಯಂತ ಅಂದರೆ ಮಂಡ್ಯ, ಮೈಸೂರು, ತುಮಕೂರು, ಶಿವಮೊಗ್ಗ, ಬೆಂಗಳೂರು ಜಿಲ್ಲೆಗಳಲ್ಲಿ ಪೂಜಿಸುತ್ತಾರೆ. ಆದಿ ಜನಾಂಗ, ಆದಿ ಕರ್ನಾಟಕ, ಗೊಲ್ಲರು, ಕುರುಬರು, ಕುಂಚಿಟಿಗರು, ನಾಮಧಾರಿ ಗೌಡರು, ಶಿವಭಕ್ತರು, ಗುಡಿಕಾರರು, ನಾಯಕರು, ಉಪ್ಪಾರರು, ಕುಂಬಾರರು, ರೈತಾಪಿ ವರ್ಗದವರೆಲ್ಲರೂ ಆಚರಿಸುತ್ತಾರೆ.

ಇದಕ್ಕೆ ವಿರುದ್ಧವಾಗಿ ಹುಣಸೂರಿನ ಮೋದೂರಿನ ಹರಿಜನರು ಕೊಂತಿಯನ್ನು ಪೂಜಿಸುವುದಿಲ್ಲ. ಪೂಜಿಸಿದರೆ ಅವರ ದನಕರುಗಳಿಗೆ ಅಶುಭವಾಗುತ್ತದೆಂಬ ನಂಬಿಕೆ ಇದೆ. ಕೊಂತಿಪೂಜೆಗೆ ಬದಲಿಗೆ ಇವರು ಬೆಳ್ಳಿಂಗಳಪ್ಪನನ್ನು ಪೂಜಿಸುತ್ತಾರೆ.

ಹೀಗೆ ಕ್ಯಾತನಹಳ್ಳಿ ರಾಮಣ್ಣ ಅವರ ಅಧ್ಯಯನದಿಂದ ಕೊಂತಿಪೂಜೆಯ ಬಗೆಗಿನ ಸಮಗ್ರ ವಿವರಗಳು ದಕ್ಕುತ್ತವೆ. ಒಂದು ಕಾಲಕ್ಕೆ ಕೊಂತಿಪೂಜೆ ಎಂಬುದು ಜನಸಾಮಾನ್ಯರಲ್ಲಿ ವಹಿಸಿದ್ದ ಪ್ರಾಮುಖ್ಯತೆಯನ್ನು ಈ ಅಧ್ಯಯನ ತಿಳಿಸುತ್ತದೆ. ಕೊಂತಿಯನ್ನು ಆಚರಿಸುವಲ್ಲಿ ಇದ್ದ ಪರಿಸರ ಸ್ನೇಹಿ ಆಚರಣೆಗಳು ಗಮನ ಸೆಳೆಯುತ್ತವೆ. ಕೊಂತಿಪೂಜೆಯ ಹಿನ್ನೆಲೆ ಹಾಗೂ ಆಶಯಗಳು ಸಹ ಜನಪದರು ತಮ್ಮ ಬದುಕಲ್ಲಿ ಸದಾಶಯವನ್ನು ಕಾಣಲು ಮಾಡುತ್ತಿದ್ದ ಪ್ರಯತ್ನವಾಗಿಯೂ ಗೋಚರಿಸುತ್ತದೆ. ಕೊಂತಿಯ ಪದಗಳನ್ನು ಗಮನಿಸಿದರೆ ಜನಪದರ ಸೃಜನಶೀಲತೆಗೆ ಬೆರಗು ಮೂಡುತ್ತದೆ. ಕೊಂತಿಯೆ ತಾವಾಗಿ ಅವಳ ಕಷ್ಟ–ನಷ್ಟಗಳನ್ನು ತಾವೇ ಕಂಡುಂಡಂತೆ ಅನುಭವಿಸಿ ಹಾಡಿರುವುದು ಗಮನಾರ್ಹ ಸಂಗತಿ. ಮಹಾಭಾರತದ ಪಾತ್ರವೊಂದು ದೇವಿಯೇ ಆಗಿ ಪೂಜೆಗೊಳ್ಳುವುದು ಜನಪದರಲ್ಲಿನ ನಂಬಿಕೆ ಹಾಗೂ ಅವರ ಕಷ್ಟಸಹಿಷ್ಣುತೆಯನ್ನು ತಿಳಿಸುತ್ತದೆ.

ಗೊಂದಲಿಗರು ಹಾಗೂ ಕೊಂತಿಪೂಜೆ ಬಗೆಗಿನ ರಾಮಣ್ಣ ಅವರ

ಅಧ್ಯಯನಗಳು ಜಾನಪದ ಲೋಕಕ್ಕೆ ಹೊಸ ಚಲನೆಯನ್ನು ಕೊಟ್ಟಿವೆ. ಇವತ್ತಿಗೆ ಗೊಂದಲಿಗರೆಂಬ ವೃತ್ತಿಗಾಯಕರು ಕಣ್ಮರೆಯಾಗಿದ್ದಾರೆ. ಹಾಗೆಯೇ ಕೊಂತಿಪೂಜೆಯ ಆಚರಣೆಯು ಇಲ್ಲವಾಗಿದೆ. ಇದಕ್ಕೆ ಬದಲಾದ ಕಾಲಮಾನ, ಜೀವನ ಶೈಲಿಗಳು ಸೇರಿದಂತೆ ಇತರ ಕಾರಣಗಳು ಇರಬಹುದು. ಆದರೆ ಯಾವುದೇ ವಸ್ತು ವಿಚಾರವೊಂದರ ಅಧ್ಯಯನ ಹೇಗಿರಬೇಕೆಂಬುದಕ್ಕೆ ರಾಮಣ್ಣ ಅವರ ಈ ಅಧ್ಯಯನಗಳು ಯಾವತ್ತಿಗೂ ಮಾದರಿಯಾಗಿಯೇ ಉಳಿಯುತ್ತವೆ. ಏಕೆಂದರೆ ಜಾನಪದವು ಕ್ಷೇತ್ರಕಾರ್ಯವನ್ನು ಬಯಸುತ್ತದೆ. ಅದಿಲ್ಲದೆ ಅಧ್ಯಯನ ಅಪೂರ್ಣ. ತಿರುಗಾಟದ ಜೊತೆಗೆ ವಿದ್ವತ್ತು, ಅಂತರ್ ಶಿಸ್ತೀಯ ಅರಿವು ಕೂಡ ಇರಬೇಕಿದೆ. ಇವುಗಳಿಂದ ಮಾತ್ರ ಅಧ್ಯಯನ ಸಮಗ್ರವಾಗಲು, ಸರಿಯಾಗಿರಲು ಸಾಧ್ಯ.

ರಾಮಣ್ಣ ಅವರ ಈ ಅಧ್ಯಯನಗಳಲ್ಲಿ ಅವರ ವಿಚಾರಗಳಲ್ಲಿನ ನಿಖರತೆ, ಸಮಗ್ರತೆ, ವಿವರಣೆ ಹಾಗೂ ವಿಶ್ಲೇಷಣೆಗಳು ಸ್ಪಷ್ಟವಾಗಿ ತಿಳಿಯುತ್ತವೆ. ಇವರ ಅಧ್ಯಯನ ವಿದ್ವತ್ಪೂರ್ಣವಾಗಿರುವುದು ಮಾತ್ರವಲ್ಲದೆ ಬಹುಮುಖಿ ಅಧ್ಯಯನವಾಗಿಯೂ ಇದೆ. ಇವರ ಪ್ರಖರ ಚಿಂತನೆಗಳೆಲ್ಲ ಇಲ್ಲಿ ದಾಖಲಾಗಿವೆ. ವಿವರಣೆ, ವಿಶ್ಲೇಷಣೆಗಳಲ್ಲಿ ಪ್ರಗತಿಮುಖಿ, ಸಮಾಜಮುಖಿ ಆಶಯಗಳು ಅಭಿವ್ಯಕ್ತಗೊಂಡಿವೆ. ಅಡಿಟಿಪ್ಪಣಿಗಳ ಮೂಲಕ ಸಮೃದ್ಧ ವಿವರಣೆಗಳನ್ನು ನೀಡಿದ್ದಾರೆ. ಹೀಗಿದ್ದು ಸಹ ತಮ್ಮ ಅಭಿಪ್ರಾಯ, ನಿಲುವು ಕೂಡ ಪರೀಕ್ಷಾರ್ಹ ಎಂಬುದನ್ನು, ಅವಲೋಕನ ಮಾಡುವ ಅಗತ್ಯವಿದೆಯೆಂದು ತಿಳಿಸಿ ಸಂಶೋಧನೆಯ ಹೊಸ ಸಾಧ್ಯತೆಗಳಿಗೆ ದಾರಿ ತೋರಿಸುವುದು ಕೂಡ ಮಹತ್ವದ ಸಂಗತಿಯಾಗಿದೆ. ಈ ಕಾರಣಗಳಿಂದ ಕ್ಯಾತನಹಳ್ಳಿ ರಾಮಣ್ಣ ಅವರ ಅಧ್ಯಯನಗಳು ಯಾವುದೇ ಪೀಳಿಗೆಯವರಿಗೆ ಮಾದರಿ ಅಧ್ಯಯನವಾಗಿಯೆ ಉಳಿಯುತ್ತವೆ ಎಂಬುದು ಖಂಡಿತವಾಗಿಯೂ ಅತಿಶಯೋಕ್ತಿಯಲ್ಲ.

**ಪರಾಮರ್ಶನ ಗ್ರಂಥಗಳು:**


1. ಕ್ಯಾತನಹಳ್ಳಿ ರಾಮಣ್ಣ, (2021), ಎರಡು ಅಧ್ಯಯನಗಳು, ಮೈಸೂರು: ಗಾಯತ್ರಿ ಪ್ರಕಾಶನ.
2. ಅರವಿಂದ ಮಾಲಗತ್ತಿ (ಪ್ರಧಾನ ಸಂಪಾದಕರು), (2006), ಜಾನಪದ ವಿಷಯ ವಿಶ್ವಕೋಶ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
3. ಅಗ್ರಹಾರ ಕೃಷ್ಣಮೂರ್ತಿ, (1999), ಬೆಳ್ದಿಂಗಳಪ್ಪನ ಪೂಜೆ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.